ಕೃಷಿ ಮಾರುಕಟ್ಟೆ ಗೋಡೌನ್‌ಗಳು

692-ಶ್ರೀ ಚಂದ್ರಕಾಂತ್ ಬೆಲ್ಲದ (ಧಾರವಾಡ): ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕರ್ನಾಟಕದ ರೈತರು ಉತ್ಪಾದಿಸುವ ಎಲ್ಲಾ ಉತ್ಪನ್ನಗಳು ಕೃಷಿ ಮಾರುಕಟ್ಟೆಗೆ ಬರಬೇಕಾದರೆ ಯಾವ ಯೋಜನೆ ಸರ್ಕಾರ ಇಟ್ಟುಕೊಂಡಿದೆ. (ವಿವರ ನೀಡುವುದು)

ಆ) ಕರ್ನಾಟಕದಲ್ಲಿ ಮಾರುಕಟ್ಟೆಯು ಸುಸಜ್ಜಿತವಾಗಿರುವ ಸಂಖ್ಯೆ ಎಷ್ಟು? ವಿವರ ಕೊಡುವುದು;

ಇ) ರೈತರ ಉತ್ಪಾದನೆ ಸಂಗ್ರಹಿಸಿ ಇಡುವ ಸಂಗ್ರಹಾಲಯ ಗೋಡೌನ್‌ಗಳಿರುವ ಮಾರ್ಕೆಟ್‌ಗಳೆಷ್ಟು ಹಾಗೂ ಇನ್ನು ಮುಂದಿನ ವರ್ಷಗಳಲ್ಲಿ ಕಟ್ಟಿಸುವ ಯೋಜನೆ ಏನಾದರೂ ಸರ್ಕಾರದ ಮುಂದೆ ಇದೆಯೇ? (ಇದ್ದಲ್ಲಿ ವಿವರ ನೀಡುವುದು)

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):

ಅ) ರೈತರು ಉತ್ಪಾದಿಸುವ ಎಲ್ಲಾ ಉತ್ಪನ್ನಗಳನ್ನು ಕೃಷಿ ಮಾರುಕಟ್ಟೆಗೆ ಬರಬೇಕೆಂಬ ಬಗ್ಗೆ ಸರ್ಕಾರದ ಯೋಜನೆ ಇರುವುದಿಲ್ಲ. ಮಾರುಕಟ್ಟೆ ಪ್ರಾಂಗಣದ ಕ್ಷೇತ್ರಗಳಲ್ಲಿ ಹೆಚ್ಚಿಗೆ ಉತ್ಪಾದಿಸುವ ಕೃಷಿ ಉತ್ಪನ್ನಗಳನ್ನು ಹಾಗೂ ಇವುಗಳ ಸಗಟು ವ್ಯಾಪಾರಕ್ಕೆ ಲಭ್ಯವಿರುವ ಉತ್ಪನ್ನಗಳನ್ನು ಮಾತ್ರ ಸಮೀಕ್ಷೆ ನಡೆಸಿ ಆಯಾ ಮಾರುಕಟ್ಟೆ ಸಮಿತಿಗಳ ವ್ಯಾಪ್ತಿಗೆ ಅನುಗುಣವಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಕಾಯ್ದೆ 1966ರ ಕಲಂ 4 ಮತ್ತು 5ರ ಅನ್ವಯ ನಿಯಂತ್ರಣಕ್ಕೆ ಒಳಪಡಿಸಿ ಇವುಗಳ ವ್ಯಾಪಾರ ವಹಿವಾಟಿಗೆ ಅಗತ್ಯವಾದ ಸೌಲಭ್ಯಗಳನ್ನು ಸಮಿತಿ ಮತಿಯಿಂದ ಕಲ್ಪಿಸಿಕೊಡಲಾಗಿದೆ.

ಆ) ರಾಜ್ಯದಲ್ಲಿರುವ 124 ಮುಖ್ಯ ಮಾರುಕಟ್ಟೆ ಪ್ರಾಂಗಣಗಳಿಗೆ ಸಂಬಂಧಿಸಿದಂತೆ 121 ಮಾರುಕಟ್ಟೆ ಪ್ರಾಂಗಣಗಳಲ್ಲಿ 323 ಉಪ ಮಾರುಕಟ್ಟೆಪ್ರಾಂಗಣಗಳ ಪೈಕಿ 130 ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಅವಶ್ಯವೆನಿಸಿದ ಮೂಲಭೂತ ಮಾರುಕಟ್ಟೆ ಸಮಿತಿಗಳ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹಂತಹಂತವಾಗಿ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

(ರಾಜ್ಯದಲ್ಲಿರುವ 124 ಮುಖ್ಯ ಮಾರುಕಟ್ಟೆಗಳ ಪೈಕಿ 121 ಮಾರುಕಟ್ಟೆ ಪ್ರಾಂಗಣಗಳು ಮತ್ತು 323 ಉಪಮಾರುಕಟ್ಟೆಗಳ ಪೈಕಿ 123 ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಗೋದಾಮು: ಅಂಗಡಿ-ವ-ಗೋದಾಮುಗಳ ಸೌಲಭ್ಯವನ್ನು ವಿವಿಧ ಯೋಜನೆ ಅಡಿಯಲ್ಲಿ ಒದಗಿಸಲಾಗಿದೆ. ಬೇಡಿಕೆಗೆ ಅನುಗುಣವಾಗಿ ಮುಂದಿನ ವರ್ಷಗಳಲ್ಲಿಯೂ ಸಹ ಗೋದಾಮುಗಳ ನಿರ್ಮಾಣವನ್ನು ಸಮಿತಿಯ ಆರ್ಥಿಕ ಪರಿಸ್ಥಿತಿಯನ್ನು ಪರಿಗಣಿಸಿ ಹಂತಹಂತರಾಗಿ ನಿರ್ಮಾಣ ಮಾಡಲಾಗುವುದು.

ಧಾರವಾಡದ ಹೊಸ ಬಸ್ ನಿಲ್ದಾಣ ಕುರಿತು

693-ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?